

ಭೂತಪ್ಪಗಳಿಗೆ ಹರಕೆ ಹೊತ್ತು ಸಾಷ್ಟಾಂಗ ನಮಸ್ಕಾರ ಹಾಕಿದ ರೀತಿ ಸಾಲಿನಲ್ಲಿ ಮಲಗಿರುವ ಹೆಣ್ಣುಮಕ್ಕಳು

'ಜಾತ್ರೆಯಿಂದ ವಾಪಸ್ ಹೋಗುವಾಗ ಒಂದು ಹಿಡಿ ಬೀಜ ತಗೊಂಡೋಗಿ ನಮ್ಮ ಮನೆ ಬೀಜದ ಜೊತೆ ಮಿಕ್ಸ್ ಮಾಡ್ತೀವಿ. ಒಳ್ಳೆ ಫಸಲು ಬರ್ತದೆ' ಎಂದು ತಾಡಿಯ ನಾಗರಾಜು ತಮ್ಮ ಕೈಯಲ್ಲಿದ್ದ ಬೀಜಗಳನ್ನು ಕಣ್ಣಿಗೊತ್ತಿಕೊಂಡರು. ಒಂದೇ ಮೂಲದ ಮನೆ ಬೀಜಗಳ ತಳಿ ಬೆಳೆದೂ ಬೆಳೆದೂ ಗುಣಮಟ್ಟ ಕುಸಿತವಾಗಿರುತ್ತದೆ. ನೂರಾರು ರೈತರು ಎರಚಿದ, ಪ್ರಸಾದದ ರೂಪದಲ್ಲಿ ಸಿಗುವ ಬೀಜಗಳು ಮನೆ ಬೀಜದ ಗುಣಮಟ್ಟ ವೃದ್ಧಿಸುತ್ತವೆ ಎಂಬ ವೈಜ್ಞಾನಿಕ ಸತ್ಯ ದೇವರ ಬೀಜದ ರೂಪದಲ್ಲಿ ರೈತರ ಮಡಿಲು ಸೇರುತ್ತದೆ.

## ಭೂತಪ್ಪ ಬಂತು ಭೂತಪ್ಪ!

ನಾಲ್ಕನೆಯ ದಿನದ ಮಧ್ಯಾಹ್ನ ಭೂತಪ್ಪಗಳು ಬರುವ ಮೂಲಕ ಜಾತ್ರೆಗೆ ಕಳೆ ಕಟ್ಟುತ್ತದೆ. ಭೂತಪ್ಪನ ಗುಡಿಯಿಂದ ದೇವಸ್ಥಾನಕ್ಕೆ ಹೋಗುವ ಗಲ್ಲಿಯಲ್ಲಿ ಗುಜುಗುಜು ಶುರುವಾಗುತ್ತದೆ. ಮಕ್ಕಳಾಗದ, ಕಾಯಿಲೆ ಬಿದ್ದ, ದೆವ್ವ ಹಿಡಿದಿದೆ ಎಂದು ನಂಬಿರುವ ಹೆಣ್ಣುಮಕ್ಕಳು ರಸ್ತೆಯ ಎರಡೂ ಬದಿಗೆ ಕೂರುತ್ತಾರೆ. ಕೈಯಲ್ಲಿ ಎಲೆ ಅಡಿಕೆ, ಬಾಳೆ ಹಣ್ಣು ಹಿಡಿದು ಕುಂತ ಇವರ ಮೇಲೆ ಅವರ ಪೋಷಕರು ಬಿಂದಿಗೆ ನೀರು ಸುರಿಯುತ್ತಾರೆ.

ಭೂತಪ್ಪಗಳು ಬರುವ ಸೂಚನೆ ಬರುತ್ತಿದ್ದಂತೆ, ನೆನೆದು ಒದ್ದೆಯಾದ ಹೆಣ್ಣುಮಕ್ಕಳು ನೆಲದ ಮೇಲೆ ಸಾಷ್ಟಾಂಗ ನಮಸ್ಕಾರ ಹಾಕಿದ ರೀತಿ ಸಾಲಿನಲ್ಲಿ ಮಲಗುತ್ತಾರೆ. ಕೈಯಲ್ಲಿ ಕತ್ತಿ ಹಿಡಿದು, ದೇವರ ಮುಖವಾಡದ ಗುರಾಣಿ ಹಿಡಿದ ಭೂತಪ್ಪಗಳು ಗರ್ಜಿಸುತ್ತಾ ಇವರ ಮೇಲೆ ನಡೆದು ಹೋಗುತ್ತಾರೆ. ಭೂತಪ್ಪ ತಮ್ಮನ್ನು ತುಳಿದರೆ ಕಷ್ಟ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇವರದು. ಹಿಂದುಳಿದ ವರ್ಗದ ಕೂಲಿಕಾರ ಹೆಣ್ಣುಮಕ್ಕಳೇ ಈ ನಂಬಿಕೆಯ ಭಾಗವಾಗಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಮದುವೆಯಾಗದ ಹೆಣ್ಣುಮಕ್ಕಳು, ಗುಣವಾಗದ ಕಾಯಿಲೆಯಿಂದ ನರಳುವ ಚಿಕ್ಕ ಮಕ್ಕಳು ಕೂಡ ಸಾಲಲ್ಲಿ ಕೂರುತ್ತಾರೆ. 'ನಮ್ಮ ಮಗನಿಗೆ ಹುಷಾರಿಲ್ಲ. ಎರಡು ವರ್ಷದಿಂದ ಬತ್ತಾ ಇದೀವಿ. ಸ್ವಾಮಿ ಕಣ್ ತೆಗೆದು ನೋಡಬೇಕು' ಎಂದು ಪೆನುಗೊಂಡ ಸಮೀಪದ ಸೋಮಂಡೇನಹಳ್ಳಿಯಿಂದ ಬಂದ ಗೋವರ್ಧನನ ಪೋಷಕರು ಭಕ್ತಿ ಭಾವದಿಂದ ಹೇಳುತ್ತಾರೆ.

'ಭೂತಪ್ಪನ ವೇಷ ಯಾರು ಬೇಕಾದ್ರೂ ಹಾಕಬಹುದು. ನೇಮ ನಿಷ್ಠೆ ಇರೋರು ಆಗಬೇಕು ಅಷ್ಟೇ. ಮೂರು ವರುಷ ಜಾತ್ರೆಗೆ ಬಂದು ಭೂತಪ್ಪನ ಸೇವೆ ಮಾಡಿದ್ರೆ ಕಷ್ಟ ಎಲ್ಲ ನಿವಾರಣೆ ಆಗ್ತದೆ. ಎಷ್ಟು ಜನರ ಕಷ್ಟ ಪರಿಹಾರ ಆಗಿರೋದು ನಾನೇ ನೋಡಿದ್ದೇನೆ' ಎನ್ನುತ್ತಾರೆ ಭಕ್ತರಹಳ್ಳಿಯ ರವಿ.

ಉರಿಯುವ ದೀವಟಿಗೆಯನ್ನು ಭಕ್ತರ ತಲೆಗೆ ಮೂರು ಬಾರಿ ಮುಟ್ಟಿಸುವ 'ಬೆಂಕಿಸೇವೆ' ಕೂಡ ಇಲ್ಲಿದೆ. ದುಷ್ಟಶಕ್ತಿಗಳಿಂದ ಅಗ್ನಿ ಕಾಪಾಡುತ್ತದೆ ಎಂಬ ನಂಬಿಕೆ. ಚಂಡಿ ಹಿಡಿಯುವ ಮಕ್ಕಳ ತಲೆಗೆ ದೀವಟಿಗೆಯ ಮುಟ್ಟಿಸಲು ಪೋಷಕರು ಸಾಲಲ್ಲಿ ನಿಂತಿರುತ್ತಾರೆ.

## ಚೆಂಡು ಹೂವಿನ ಸಂಭ್ರಮ

ಜಿಲ್ಲರಗುಂಟೆಯ ಜಾತ್ರೆಯ ವಿಶೇಷ ಇರುವುದು ಆರತಿ ಸೇವೆಯಲ್ಲಿ. ಹಸಿ ಅಕ್ಕಿಯ ತಂಬಿಟ್ಟಿನ ಆರತಿಗಳನ್ನು ಹೊತ್ತು ಹಳ್ಳಿಗರು ಬರುತ್ತಾರೆ. 'ಜಕ್ಕಣಕ್ಕ... ಜಕ್ಕಣಕ್ಕ...' ಎಂಬ ತಮಟೆಯ ಸದ್ದಿಗೆ ಆರತಿ ಹೊತ್ತ ಗಂಡು ಮಕ್ಕಳು ಡ್ಯಾನ್ಸ್ ಮಾಡುತ್ತಾ ಬರುವುದನ್ನು ನೋಡುವುದೇ ಸೊಗಸು. ಪೈಪೋಟಿಗೆ ಬಿದ್ದವರಂತೆ ಬೇರೆ ಬೇರೆ ಊರಿನ ಗುಂಪುಗಳು ದೇವಾಲಯದ ಆವರಣದಲ್ಲಿ ತಮಟೆಯ ಸದ್ದಿಗೆ ಹೆಜ್ಜೆ ಹಾಕುತ್ತಾರೆ.

ಕೆಲವು ಮನೆತನದವರು ಗಾಡಿಯಲ್ಲಿ ಒಂದೂವರೆ ಪಲ್ಲದ ತಂಬಿಟ್ಟಿನ ಆರತಿಯನ್ನು ತರುತ್ತಾರೆ. ಆರತಿಯನ್ನು ಚೆಂಡು ಹೂವುಗಳಿಂದ ಶೃಂಗರಿಸುತ್ತಾರೆ.

ಇಪ್ಪತ್ತು ಮೂವತ್ತು ವರ್ಷಗಳಿಗೆ ಮೊದಲು, ಮಧುಗಿರಿ, ಮಡಕಶಿರಾದ ಹಳ್ಳಿಗಳ ಮೆಣಸಿನಕಾಯಿ ತೋಟಗಳು, ಮನೆಯ ಹಿತ್ತಲಿನಲ್ಲಿ ಚೆಂಡು ಹೂವಿನ ಬಣ್ಣದೋಕುಳಿ ಇರುತ್ತಿತ್ತು. ಕೇಸರಿ, ಹಳದಿಯ ಆಕರ್ಷಕ ಚೆಂಡು ಹೂವುಗಳು, ಕೆಂಪು ವರ್ಣದ ಚಿಂತಾಮಣಿ ಹೂವು ಮೆಣಸಿನಕಾಯಿ ಹೊಲಕ್ಕೆ ರಂಗು ತುಂಬುತ್ತಿದ್ದವು. ಇವುಗಳ ನಡುವೆ ಅಲ್ಲೊಂದು ಇಲ್ಲೊಂದು ಕತ್ತೆ ಚೆಂಡು ಹೂವು ಇಣುಕಿ ನೋಡುತ್ತಿತ್ತು.

ಮಾರುಕಟ್ಟೆಯ ಪ್ಯಾಕೆಟ್ ಬೀಜ ಬಂದ ಲಗಾಯ್ತಿನಿಂದ ದೇಸಿ ಚೆಂಡು ಹೂವಿನ ತಳಿಗಳು ನೇಪಥ್ಯಕ್ಕೆ ಸರಿದು, ಹೈಬ್ರಿಡ್ ಚೆಂಡು ಹೂವು ಸಾಮಾನ್ಯವಾಯ್ತು. ದಸರಾ ಅಥವಾ ಅಯ್ಯಪ್ಪ ಸ್ವಾಮಿ ಹಬ್ಬಕ್ಕೆ ಬರುವಂತೆ ಎಕರೆಗಟ್ಟಲೆ ಚೆಂಡು ಹೂವು ಬೆಳೆಯುವ ಪರಿಪಾಟ ಆರಂಭವಾಯಿತು. ಇವಕ್ಕೆ ನಾಟಿ ಚೆಂಡು ಹೂವಿನ ಚೆಲುವೂ ಇಲ್ಲ, ಘಮಲೂ ಇಲ್ಲ.

ಜಿಲ್ಲರಗುಂಟೆ ಜಾತ್ರೆಯಲ್ಲಿ ಚೆಂಡು ಹೂವಿನದೇ ಆರತಿ.

